ರಾಷ್ಟ್ರೀಯ
ಡೋಪ್ ನಿರೋಧಕ
ಏಜೆನ್ಸಿ

निष्पक्ष खेल
Play fair



ಎಥ್‌ಲೀಟ್ ಡೋಪಿಂಗ್ ಕಂಟ್ರೋಲ್ ಪ್ರೊಸೆಸ್

ನಾಡಾ-ಅಧಿಕೃತ, ವರ್ಚುವಲ್ ಮತ್ತು ಅಂತರ್ಗತ

ಪ್ರಸ್ತಾವನೆ

ಡೋಪ್ ನಿಯಂತ್ರಣ (ತಪಾಸಣೆ) ಎಂಬುದು ಆಟದ ಮೈದಾನದಲ್ಲಿ ಏಕರೂಪತೆ ಮತ್ತು ಶುದ್ಧ ಕ್ರೀಡೆಯನ್ನು ಖಚಿತಪಡಿಸಿಕೊಳ್ಳಲು ಡೋಪಿಂಗ್ ವಿರೋಧಿ ಸಂಸ್ಥೆಗಳು (ಎಡಿಒ) ಬಳಸುವಂತಹ ಒಂದು ಸಾಧನ.

ಯಾವುದೇ ಡೋಪಿಂಗ್ ವಿರೋಧಿ ಕಾರ್ಯಕ್ರಮದ ಪ್ರಮುಖ ಅಂಶವೆಂದರೆ ಮಾದರಿ ಸಂಗ್ರಹಣೆ. ಇದು ಎಥ್ಲೀಟ್‌ನ ರಕ್ತ, ಮೂತ್ರ, ಒಣಗಿದ ರಕ್ತದ ಕಲೆಗಳು ಅಥವಾ ವಾಡಾ ಅನುಮೋದಿತ ಯಾವುದೇ ಮಾದರಿಯನ್ನು ಸಂಗ್ರಹಿಸುವುದು, ನಂತರ ಸರಿಯಾದ ದಾಖಲೀಕರಣ, ಮಾದರಿಗಳ ಸಿದ್ಧತೆ ಮತ್ತು ವಾಡಾದ ಮಾನ್ಯತೆ ಪಡೆದ ಪ್ರಯೋಗಾಲಯಕ್ಕೆ ಕಳುಹಿಸುವುದನ್ನು ಒಳಗೊಂಡಿರುತ್ತದೆ.

ಕ್ರೀಡೆಗಳಲ್ಲಿ ಭಾಗವಹಿಸುವ ಎಥ್ಲೀಟ್‌ಗಳು ಮತ್ತು ಡೋಪ್ ನಿರೋಧಿ ನಿಯಮಗಳ ಅಡಿಯಲ್ಲಿ ಬರುವ ಎಥ್ಲೀಟ್ಸ್‌ನ ಮೂತ್ರ ಮತ್ತು / ಅಥವಾ ರಕ್ತ ಪರೀಕ್ಷೆಗಳನ್ನು ಅಂತರರಾಷ್ಟ್ರೀಯ ಸಂಸ್ಥೆ (ಐಎಫ್), ರಾಷ್ಟ್ರೀಯ ಡೋಪ್ ನಿರೋಧಿ ಸಂಸ್ಥೆ (ನಾಡೋ) ಅಥವಾ ಪ್ರಮುಖ ಕಾರ್ಯಕ್ರಮ ಆಯೋಜಕ (ಎಂಇಒ) ವತಿಯಿಂದ ಯಾವುದೇ ಸಮಯದಲ್ಲಿ, ಎಲ್ಲಿ ಬೇಕಾದರೂ ಮಾಡಬಹುದು. ಈ ಉದ್ದೇಶಕ್ಕಾಗಿ, ಎಲ್ಲಾ ಪರೀಕ್ಷೆಗಳನ್ನು ವಿಶೇಷವಾಗಿ ತರಬೇತಿ ಪಡೆದ ಡೋಪ್ ಕಂಟ್ರೋಲ್ ಸಿಬ್ಬಂದಿಗಳು (ಡಿಸಿಪಿ) ನಿರ್ವಹಿಸುತ್ತಾರೆ.

ಪರೀಕ್ಷೆಯನ್ನು ಸ್ಪರ್ಧೆಯ ಸಮಯದಲ್ಲಿ ಮತ್ತು ಸ್ಪರ್ಧೆಯ ಹೊರಗಿನ ಅವಧಿಯಲ್ಲಿ, ಅಂದರೆ, ಎಥ್ಲೀಟ್‌ನ ನಿವಾಸ, ಕೆಲಸದ ಸ್ಥಳ ಅಥವಾ ತರಬೇತಿ ತಾಣದಲ್ಲಿ ನಡೆಸಬಹುದಾಗಿದೆ.

ಪರೀಕ್ಷೆಗಾಗಿ ಎಥ್ಲೀಟ್ಸ್‌ನ ಆಯ್ಕೆಯನ್ನು ಹೇಗೆ ಮಾಡಲಾಗುತ್ತದೆ?

• ಸ್ಪರ್ಧೆಯ ಸಮಯದಲ್ಲಿ: ಎಥ್ಲೀಟ್ಸ್‌ನ ಯಾದೃಚ್ಛಿಕ (Random) ಆಯ್ಕೆ ಕೊನೆಯ ಸ್ಥಿತಿ ಅಥವಾ ಯಾವುದೇ ವಿಶೇಷ ಕಾರಣಕ್ಕಾಗಿ ಅಗತ್ಯವೆನಿಸಿದಲ್ಲಿ ಮಾಡಬಹುದಾಗಿದೆ.

• ಸ್ಪರ್ಧೆಯ ಹೊರಗೆ: ಅಥ್ಲೀಟ್ಸ್‌ಅನ್ನು ಯಾವುದೇ ಸಮಯದಲ್ಲಿ, ಎಲ್ಲಿ ಬೇಕಾದರೂ ಮತ್ತು ಮುನ್ಸೂಚನೆ ಇಲ್ಲದೆ ಡೋಪ್ ಪರೀಕ್ಷೆಗೆ ಒಳಪಡಿಸಬಹುದಾಗಿದೆ.

ಯಾವುದೇ ಎಥ್ಲೀಟ್ ಅಪ್ರಾಪ್ತ ವಯಸ್ಸಿನವರಾಗಿದ್ದರೆ ಅಥವಾ ವಿಕಲ ಚೇತನರಾಗಿದ್ದರೆ, ಎಲ್ಲಿ ಅಗತ್ಯ ಮತ್ತು ಸಾಧ್ಯವಿದೆಯೋ ಅಲ್ಲಿ ಮಾದರಿ ಸಂಗ್ರಹ ಕಾರ್ಯವಿಧಾನದಲ್ಲಿ ತಿದ್ದುಪಡಿ ಮಾಡಬಹುದು.



ಪರೀಕ್ಷೆ (ಮೂತ್ರ)

ಪರೀಕ್ಷಾ ಪ್ರಕ್ರಿಯೆಯ 11 ಹಂತಗಳಲ್ಲಿ ಸೇರಿವೆ:

ಹಂತ 1

ಎಥ್ಲೀಟ್ ಆಯ್ಕೆ

ಎಥ್ಲೀಟ್ಸ್‌ಅನ್ನು ಯಾವುದೇ ಸಮಯ ಮತ್ತು ಯಾವುದೇ ಸ್ಥಳದಲ್ಲಿ ಡೋಪ್ ಪರೀಕ್ಷೆಗೆ ಆಯ್ಕೆ ಮಾಡಬಹುದು.

ಹಂತ 2

ಅಧಿಸೂಚನೆ

ಎಥ್ಲೀಟ್‌ಅನ್ನು ಡೋಪ್ ನಿಯಂತ್ರಣ ಪ್ರಕ್ರಿಯೆಗೆ (ಪರೀಕ್ಷೆಗೆ) ಆಯ್ಕೆ ಮಾಡಲಾಗಿದೆ ಎಂದು ಡೋಪ್ ನಿಯಂತ್ರಣ ಅಧಿಕಾರಿ (ಡಿಸಿಒ) ಅಥವಾ ಎಥ್ಲೀಟ್‌ನ ಪ್ರೋಷಕರು ತಿಳಿಸುತ್ತಾರೆ ಮತ್ತು ಯಾವ ಎಡಿಒ ಪ್ರಾಧಿಕಾರದ ಅಡಿಯಲ್ಲಿ ಅವರನ್ನು ಪರೀಕ್ಷಿಸಲಾಗುತ್ತಿದೆ ಎಂದು ಅವರಿಗೆ ತಿಳಿಸಲಾಗುತ್ತದೆ.

ಹಂತ 3

ಡೋಪ್ ನಿಯಂತ್ರಣ ಸ್ಟೇಷನ್ ನಲ್ಲಿ ರಿಪೋರ್ಟಿಂಗ್

ಎಥ್ಲೀಟ್ ತಕ್ಷಣ ಡೋಪ್ ನಿಯಂತ್ರಣ ಸ್ಟೇಶನ್‌ಗೆ ರಿಪೋರ್ಟ್ ಮಾಡಬೇಕು (ಆದರೆ, ಡಿಸಿಒ / ಬಿಸಿಒ ಮತ್ತು ಸಂರಕ್ಷಕರು ಸೂಚಿಸಿದರೆ ಅವರಿಗೆ ಪದಕ ವಿತರಣೆ ಸಮಾರಂಭ ಇತ್ಯಾದಿಗಳಿಗೆ ವಿನಾಯಿತಿ ನೀಡಬಹುದು)

ಹಂತ 4

ಮಾದರಿ ಸಂಗ್ರಹಣಾ ಪಾತ್ರೆಗಳ ಆಯ್ಕೆ

ಡೋಪ್ ನಿಯಂತ್ರಣ ಸಿಬ್ಬಂದಿ ಒದಗಿಸಿದ ಪಾತ್ರೆಗಳಲ್ಲಿ ಒಂದನ್ನು ಎಥ್ಲೀಟ್ ಮೂತ್ರ ಮಾದರಿ ಸಂಗ್ರಹಕ್ಕಾಗಿ ಆಯ್ಕೆ ಮಾಡಬೇಕು.

ಹಂತ 5

ಮಾದರಿಯನ್ನು ಒದಗಿಸುವುದು

ಎಥ್ಲೀಟ್ ಮಾದರಿಯನ್ನು ನೀಡಲು ಸಿದ್ಧವಾದಾಗ, ಮೂತ್ರದ ಮಾದರಿಯನ್ನು ಒದಗಿಸುವಾಗ ಡಿಸಿಒ ಅಥವಾ ಕಸ್ಟೋಡಿಯನ್ ಸಾಕ್ಷಿಯಾಗಿ ಇರುತ್ತಾರೆ.

ಹಂತ 6

ಮೂತ್ರದ ಪ್ರಮಾಣ

ಮೂತ್ರದ ಮಾದರಿಗಳಿಗೆ ಕನಿಷ್ಠ 90 ಮಿ.ಲೀ ಅಗತ್ಯವಿದೆ. ಮೊದಲ ಮಾದರಿ 90 ಮಿ.ಲೀ ಇಲ್ಲದಿದ್ದರೆ, ಎಥ್ಲೀಟ್‌ಗೆ ಕಾಯುವಂತೆ ಮತ್ತು ಹೆಚ್ಚುವರಿ ಮಾದರಿ ನೀಡುವಂತೆ ಹೇಳಬಹುದು.



ಹಂತ 7
ಮಾದರಿಗಳ ವಿಭಜನೆ

ಎಥ್‌ಲೀಟ್ ತಮ್ಮ ಮೂತ್ರವನ್ನು ಎ ಮತ್ತು ಬಿ ಬಾಟಲಿಗಳಾಗಿ ವಿಂಗಡಿಸಬೇಕು. ಉಳಿದ ಮೂತ್ರವನ್ನು ಮಾದರಿ ಸಂಗ್ರಹ ಪಾತ್ರೆಯಲ್ಲಿ ಬಿಡುತ್ತಾರೆ. ಎಥ್‌ಲೀಟ್‌ನ ಎ ಮಾದರಿ ಪ್ರತಿಕೂಲ ವಿಶ್ಲೇಷಣಾತ್ಮಕ ತೀರ್ಮಾನವನ್ನು ("ಸಕಾರಾತ್ಮಕ" ಫಲಿತಾಂಶ) ಹೊಂದಿದ್ದರೆ ಆಗ ಎರಡನೇ ವಿಶ್ಲೇಷಣೆಗೆ ಒಳಪಡಿಸಲು ಬಿ ಮಾದರಿಯನ್ನು ನೀಡುವ ಅವಕಾಶವಿದೆ.

ಹಂತ 8
ಮಾದರಿಯನ್ನು ಸೀಲ್ ಬಂದ್ ಮಾಡುವುದು

ಎ ಮತ್ತು ಬಿ ಬಾಟಲಿಗಳನ್ನು ಎಥ್‌ಲೀಟ್ ಸೀಲ್ ಬಂದ್ ಮಾಡಬೇಕು.

ಹಂತ 9
ವಿಶಿಷ್ಟ ಗಂಭೀರತೆಯ ಮಾಪನ

ಡಿಸಿಒ ಎಥ್‌ಲೀಟ್‌ನ ಮೂತ್ರದ ವಿಶಿಷ್ಟ ಗಂಭೀರತೆಯನ್ನು ಅಳೆಯುತ್ತದೆ ಮತ್ತು ಅದು ಪ್ರಯೋಗಾಲಯದ ಮಾನದಂಡಗಳನ್ನು ಪೂರೈಸುತ್ತದೆಯೇ ಎಂದು ನಿರ್ಧರಿಸಲಾಗುತ್ತದೆ. ಮಾದರಿಯು ತುಂಬಾ ತೆಳುವಾಗಿದ್ದರೆ, ಹೆಚ್ಚುವರಿ ಮಾದರಿಯನ್ನು(ಮಾದರಿಗಳನ್ನು) ನೀಡುವಂತೆ ಎಥ್‌ಲೀಟ್‌ಗೆ ಹೇಳಲಾಗುತ್ತದೆ.

ಹಂತ 10
ಡೋಪ್ ನಿಯಂತ್ರಣ ಫಾರ್ಮ್ (ಡಿಸಿಎಫ್) ಪೂರ್ಣಗೊಳಿಸುವುದು

ಎಥ್‌ಲೀಟ್ ಡಿಸಿಎಫ್ ಅನ್ನು ಕಾಗದ ಅಥವಾ ಡಿಜಿಟಲ್ ರೂಪದಲ್ಲಿ ಡಿಸಿಒ ಬಳಿ ಭರ್ತಿ ಮಾಡುತ್ತಾರೆ. ಎಥ್‌ಲೀಟ್ ಅವರಿಂದ ವೈಯಕ್ತಿಕ ಮಾಹಿತಿ, ಬಳಸಿದ ಪದಾರ್ಥಗಳು ಅಥವಾ ವಿಧಾನಗಳ ಪಟ್ಟಿ ಮತ್ತು ಡೋಪ್ ನಿಯಂತ್ರಣ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ಟಿಪ್ಪಣಿಗಳನ್ನು ನೀಡುವಂತೆ ಕೇಳಲಾಗುತ್ತದೆ. ಎಥ್‌ಲೀಟ್‌ಗೆ ಡಿಸಿಎಫ್‌ನ ಪ್ರಿಂಟ್ ಅಥವಾ ಡಿಜಿಟಲ್ ಪ್ರತಿ ಸಿಗುತ್ತದೆ.

ಹಂತ 11
ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತದೆ

ಎಥ್‌ಲೀಟ್‌ನ ಸೀಲ್ ಬಂದ್ ಮಾಡಿದ ಮಾದರಿಯನ್ನು ಭದ್ರಪಡಿಸಿ ವಾಡಾ ವತಿಯಿಂದ ಮಾನ್ಯತೆ ಪಡೆದ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತದೆ. ಮಾದರಿಯೊಂದಿಗೆ ಬರುವ ಡಿಸಿಎಫ್ ಪ್ರಯೋಗಾಲಯದ ಪ್ರತಿಯನ್ನು ಅನಾಮಧೇಯವಾಗಿ ಇಡಲಾಗುತ್ತದೆ. ಇದರಲ್ಲಿ ಕೇವಲ ಮಾದರಿಯ ಬಾಟಲ್ ನಂಬರ್, ಆಟದ ಹೆಸರು ಮತ್ತು ಎಥ್‌ಲೀಟ್‌ವಿನ ಲಿಂಗವನ್ನು ಮಾತ್ರ ಸೂಚಿಸಲಾಗುತ್ತದೆ.



ಪರೀಕ್ಷೆ (ರಕ್ತ)

ಪರೀಕ್ಷಾ ಪ್ರಕ್ರಿಯೆಯ 9 ಹಂತಗಳು ಹೀಗಿವೆ:

ಹಂತ 1

ಎಥ್‌ಲೀಟ್ ಆಯ್ಕೆ

ಎಥ್‌ಲೀಟ್‌ಅನ್ನು ಯಾವುದೇ ಸಮಯದಲ್ಲಿ ಮತ್ತು ಯಾವುದೇ ಸ್ಥಳದಲ್ಲಿ ಪರೀಕ್ಷೆಗೆ ಆಯ್ಕೆ ಮಾಡಬಹುದು.

ಹಂತ 2

ಅಧಿಸೂಚನೆ

ಎಥ್‌ಲೀಟ್‌ಗೆ ಡೋಪ್ ನಿಯಂತ್ರಣ ಅಧಿಕಾರಿ (ಡಿಸಿಒ) ಅಥವಾ ಗಾರ್ಡಿಯನ್ ಮೂಲಕ ಅವರನ್ನು ಡೋಪ್ ನಿಯಂತ್ರಣಕ್ಕೆ (ಪರೀಕ್ಷೆಗೆ) ಆಯ್ಕೆ ಮಾಡಲಾಗಿದೆ ಎಂದು ತಿಳಿಸಲಾಗುತ್ತದೆ ಮತ್ತು ಅವರನ್ನು ಯಾವ ಎಡಿಒ ಪ್ರಾಧಿಕಾರದ ಅಡಿಯಲ್ಲಿ ಪರೀಕ್ಷಿಸಲಾಗುತ್ತಿದೆ ಎಂಬುದನ್ನು ಅವರಿಗೆ ತಿಳಿಸಲಾಗುತ್ತದೆ.

ಹಂತ 3

ಡೋಪಿಂಗ್ ನಿಯಂತ್ರಣ ಸ್ಟೇಶನ್‌ಗೆ ರಿಪೋರ್ಟ್ ಮಾಡುವುದು

ಎಥ್‌ಲೀಟ್ ತಕ್ಷಣ ಡೋಪ್ ನಿಯಂತ್ರಣ ಸ್ಟೇಶನ್‌ಗೆ ರಿಪೋರ್ಟ್ ಮಾಡಬೇಕು (ಅಗತ್ಯವಿದ್ದರೆ, ಒಮ್ಮೆ ಚೆಕ್ ಇನ್ ಮಾಡಿದ ನಂತರ, ಪದಕ ವಿತರಣಾ ಸಮಾರಂಭ ಇತ್ಯಾದಿಗಳಿಗೆ ವಿನಾಯಿತಿ ನೀಡಬಹುದು).

ಹಂತ 4

ರಕ್ತ ಸಂಗ್ರಹ ಕಿಟ್‌ನ ಆಯ್ಕೆ

ಡೋಪ್ ನಿಯಂತ್ರಣ ಸಿಬ್ಬಂದಿ ಒದಗಿಸಿದ ಪಾತ್ರೆಗಳಿಂದ ಎಥ್‌ಲೀಟ್ ರಕ್ತ ಸಂಗ್ರಹ ಕಿಟ್ ಅನ್ನು ಆಯ್ಕೆ ಮಾಡುತ್ತಾರೆ.

ಹಂತ 5

ಮಾದರಿಯನ್ನು ಒದಗಿಸುವುದು

ವೆಯಿನ್ ಪಂಕ್ಚರ್ ಮಾಡುವ ಮೊದಲು ಕನಿಷ್ಠ 10 ನಿಮಿಷಗಳ ಕಾಲ ಕುಳಿತು ವಿಶ್ರಾಂತಿ ಪಡೆಯುವಂತೆ ಎಥ್‌ಲೀಟ್‌ಗೆ ಹೇಳಲಾಗುತ್ತದೆ.

ರಕ್ತ ಸಂಗ್ರಹ ಅಧಿಕಾರಿ (ಬಿಸಿಒ) ಎಥ್‌ಲೀಟ್‌ನ ನಾನ್-ಡಾಮಿನೆಂಟ್ ಆರ್ಮ್‌ಅನ್ನು ಮುಂದಕ್ಕೆ ಚಾಚುವಂತೆ ಹೇಳುತ್ತಾರೆ, ಮೇಲಿನ ತೋಳಿನ ಮೇಲೆ ಟರ್ನಿಕಟ್ ಅನ್ನು ಇರಿಸಿ ಪಂಕ್ಚರ್ ಮಾಡಲಿರುವ ಜಾಗದಲ್ಲಿ ತ್ವಚೆಯನ್ನು ಸ್ವಚ್ಛಗೊಳಿಸುತ್ತಾರೆ. ಬಿಸಿಒ ಎಥ್‌ಲೀಟ್‌ನ ರಕ್ತ ಪಡದುಕೊಳ್ಳುತ್ತಾರೆ ಮತ್ತು ಪ್ರತ್ಯೇಕ ವ್ಯಾಕ್ಯುನೇಟರ್ ಬ್ಲಡ್ ಟ್ಯೂಬ್‌ನಲ್ಲಿ ಅಗತ್ಯ ಇರುವ ಪ್ರಮಾಣದ ರಕ್ತವನ್ನು ತುಂಬುತ್ತಾರೆ.



ಒಣ ರಕ್ತದ ಸ್ಪಾಟ್ ವಿಶ್ಲೇಷಣೆಗಾಗಿ: ಡಿಸಿಒ / ಬಿಸಿಒ ಪಂಕ್ಚರ್ ಗೆ ಅತ್ಯಂತ ಸೂಕ್ತವಾದ ಸ್ಥಳವನ್ನು ನಿರ್ಣಯಿಸುತ್ತಾರೆ, ಅದರಿಂದ ಎಥ್ಲೀಟ್ ಅಥವಾ ಅವರ ಕ್ರೀಡಾ ಸಾಮರ್ಥ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇರುವುದಿಲ್ಲ
ಎಥ್ಲೀಟ್ ಸ್ಯಾಂಪ್ ಕಲೆಕ್ಷನ್ ಸೈಟನ್ನು ವಾರ್ಮ್ ಮಾಡುತ್ತಾರೆ. ಡಿಸಿಒ/ಬಿಸಿಒ ಬ್ಲಡ್ ಸ್ಯಾಂಪ್ಲ್ ಸೈಟ್ ಅನ್ನು ಸ್ವೆರೈಲ್ ಡಿಸ್ಇನ್ಫೆಕ್ಟೆಂಟ್ ಪ್ಯಾಡ್ಸ್ ಅಥವಾ ಸ್ವಾಬ್ ಗಳಿಂದ ಡಿಸ್ಇನ್ಫೆಕ್ಟೆಂಟ್ ಮಾಡುತ್ತಾರೆ'.
ಡಿಸಿಒ/ಬಿಸಿಒ ಬೆರಳುಗಳಿಂದ ಅಥವಾ ತೋಳಿನ ಮೇಲ್ಭಾಗದಿಂದ ರಕ್ತವನ್ನು ಸಂಗ್ರಹಿಸುತ್ತಾರೆ.

ಹಂತ 6
ಮಾದರಿಗಳ ವಿಭಜನೆ

ಬಿಸಿಒ ವ್ಯಾಕ್ಯುಟೇನರ್ ಟ್ಯೂಬ್ ಗಳನ್ನು ಎ ಮತ್ತು ಬಿ ಕಿಟ್ ನಲ್ಲಿ ಇರಿಸುತ್ತಾರೆ (ಎಬಿಪಿ ಪ್ರೋಗ್ರಾಂ ಭಾಗವಾಗಿ ರಕ್ತದ ಮಾದರಿಯನ್ನು ಸಂಗ್ರಹಿಸಿದರೆ, ಕೇವಲ ಒಂದು ಬಾಟಲಿ ಮಾತ್ರ ಬೇಕಾಗಬಹುದು).

ಒಣ ರಕ್ತದ ಸ್ಪಾಟ್ ವಿಶ್ಲೇಷಣೆಗಾಗಿ: ಡಿಸಿಒ/ಬಿಸಿಒ ಡಿಬಿಎಸ್ ಮಾದರಿಗಳನ್ನು A ಮತ್ತು B ಎಂದು ಲೇಬಲ್ ಮಾಡಲಾದ ಸುರಕ್ಷಿತ ಕಿಟ್ ಗೆ ವರ್ಗಾಯಿಸಲಾಗುತ್ತದೆ.

ಹಂತ 7
ಮಾದರಿಗಳನ್ನು ಸೀಲ್ ಮಾಡುವುದು

ಎಥ್ಲೀಟ್ ಎ ಮತ್ತು ಬಿ ಬಾಟಲಿಗಳನ್ನು ಸೀಲ್ ಮಾಡುತ್ತಾರೆ.

ಹಂತ 8
ಡೋಪ್ ನಿಯಂತ್ರಣ ಫಾರ್ಮ್ (ಡಿಸಿಎಫ್) ಪೂರ್ಣಗೊಳಿಸುವುದು

ಎಥ್ಲೀಟ್ ಡಿಸಿಎಫ್ ಅನ್ನು ಡಿಸಿಒ ಮೂಲಕ ಕಾಗದ ಅಥವಾ ಡಿಜಿಟಲ್ ರೂಪದಲ್ಲಿ ಭರ್ತಿ ಮಾಡುತ್ತಾರೆ. ಎಥ್ಲೀಟ್‌ರಿಂದ ವೈಯಕ್ತಿಕ ಮಾಹಿತಿ, ಬಳಕೆ ಮಾಡಿದ ಪದಾರ್ಥಗಳು ಅಥವಾ ವಿಧಾನಗಳ ಪಟ್ಟಿ ಮತ್ತು ಡೋಪ್ ನಿಯಂತ್ರಣ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ಟಿಪ್ಪಣಿಗಳನ್ನು ಒದಗಿಸುವಂತೆ ಕೇಳಲಾಗುತ್ತದೆ. ಎಥ್ಲೀಟ್‌ಗೆ ಡಿಸಿಎಫ್ ನ ಒಂದು ಪ್ರಿಂಟ್ ಅಥವಾ ಡಿಜಿಟಲ್ ಪ್ರತಿ ಸಿಗುತ್ತದೆ.

ಹಂತ 9
ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತದೆ

ಎಥ್ಲೀಟ್‌ನ ಸೀಲ್ ಬಂದ್ ಮಾಡಿದ ಮಾದರಿಯನ್ನು ಭದ್ರಪಡಿಸಿ ವಾಡಾದ ವತಿಯಿಂದ ಮಾನ್ಯತೆ ಪಡೆದ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತದೆ. ಮಾದರಿಯೊಂದಿಗೆ ಬರುವ ಡಿಸಿಎಫ್ ನ ಪ್ರಯೋಗಾಲಯದ ಪ್ರತಿಯನ್ನು ಅನಾಮಧೇಯವಾಗಿ ಇಡಲಾಗುತ್ತದೆ, ಇದರಲ್ಲಿ ಕೇವಲ ಮಾದರಿಯ ಬಾಟಲಿ ನಂಬರ್, ಕ್ರೀಡೆಯ ಹೆಸರು ಮತ್ತು ಎಥ್ಲೀಟ್‌ನ ಲಿಂಗವನ್ನು ಮಾತ್ರ ಸೂಚಿಸಲಾಗುತ್ತದೆ.



ವಿಳಂಬ ಕುರಿತ ವಿನಂತಿ


ಎಥ್ಲೀಟ್ ತಕ್ಷಣವೇ ಡೋಪ್ ನಿಯಂತ್ರಣ ಸ್ಟೇಶನ್‌ನಲ್ಲಿ ತಕ್ಷಣ ರಿಪೋರ್ಟ್ ಮಾಡಲು ವಿಳಂಬವಾಗುವ ಸಂದರ್ಭಗಳು ಇರಬಹುದು. ಎಥ್ಲೀಟ್‌ಗಳು ಈ ಕೆಳಗಿನ ಅನುಮತಿಸಬಹುದಾದ ಕಾರಣಗಳಿಗಾಗಿ ವಿಳಂಬದ ಬಗ್ಗೆ ವಿನಂತಿ ಮಾಡುವ ಹಕ್ಕನ್ನು ಹೊಂದಿದ್ದಾರೆ. ವಿಳಂಬಕ್ಕೆ ಅವಕಾಶ ನೀಡುವುದು ನಿಮಗೆ ಮಾಹಿತಿ ನೀಡಿದ ಡೋಪ್ ನಿಯಂತ್ರಣ ಸಿಬ್ಬಂದಿ ತೆಗೆದುಕೊಂಡ ನಿರ್ಧಾರವಾಗಿದೆ.

ಸ್ಪರ್ಧೆ ನಡೆಯುವ ಅವಧಿಯಲ್ಲಿ ಎಥ್ಲೀಟ್ ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿ ವಿಳಂಬಗಳಿಗಾಗಿ ವಿನಂತಿಸಬಹುದು:

- ಪದಕ ವಿತರಣೆ ಸಮಾರಂಭದಲ್ಲಿ ಭಾಗವಹಿಸಲು
- ಮಾಧ್ಯಮ ಬದ್ಧತೆಗಳನ್ನು ಪೂರೈಸಲು
- ಮುಂದಿನ ಸ್ಪರ್ಧೆಯಲ್ಲಿ ಸೇರಿಕೊಳ್ಳಲು
- ವಾರ್ಮ್ ಡೌನ್
- ವೈದ್ಯಕೀಯ ಚಿಕಿತ್ಸೆ ಪಡೆಯಲು
- ಭಾಷಾಂತರಕಾರನನ್ನು ಹುಡುಕಲು
- ನ್ಯಾಯೋಚಿತವಾದ ಮತ್ತು ದಾಖಲಿಸಬಹುದಾದ ಇತರ ಅಸಾಧಾರಣ ಪರಿಸ್ಥಿತಿಗಳು

ಸ್ಪರ್ಧೆಯಿಂದ ಹೊರಗಿರುವ ಅವಧಿಯಲ್ಲಿ ಎಥ್ಲೀಟ್ ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ವಿಳಂಬಕ್ಕಾಗಿ ವಿನಂತಿಸಬಹುದು:

- ಪದಕ ವಿತರಣೆ ಸಮಾರಂಭದಲ್ಲಿ ಭಾಗವಹಿಸಲು
- ಮಾಧ್ಯಮ ಬದ್ಧತೆಗಳನ್ನು ಪೂರೈಸಲು
- ಮುಂದಿನ ಸ್ಪರ್ಧೆಯಲ್ಲಿ ಸೇರಿಕೊಳ್ಳಲು
- ವಾರ್ಮ್ ಡೌನ್
- ವೈದ್ಯಕೀಯ ಚಿಕಿತ್ಸೆ ಪಡೆಯಲು
- ಭಾಷಾಂತರಕಾರರನ್ನು ಹುಡುಕಲು
- ನ್ಯಾಯೋಚಿತವಾದ ಮತ್ತು ದಾಖಲಿಸಬಹುದಾದ ಇತರ ಅಸಾಧಾರಣ ಪರಿಸ್ಥಿತಿಗಳು



ಅಪ್ರಾಪ್ತ ವಯಸ್ಕರು ಮತ್ತು ವಿಕಲಚೇತನ ಎಥ್ಲೀಟ್‌ಗಳಿಗೆ ತಿದ್ದುಪಡಿಗಳು.

ಅಪ್ರಾಪ್ತ ವಯಸ್ಕರನ್ನು ಪರೀಕ್ಷಿಸುವಾಗ, ಕಾರ್ಯವಿಧಾನದಲ್ಲಿನ ಪ್ರಮುಖ ತಿದ್ದುಪಡಿಗಳು ಈ ಕೆಳಗಿನಂತಿವೆ. ಇವುಗಳ ಕುರಿತು ಎಥ್ಲೀಟ್‌ಗಳು ತಿಳಿದುಕೊಳ್ಳಬೇಕು.

• ಅಪ್ರಾಪ್ತ ವಯಸ್ಕ ಎಥ್ಲೀಟ್‌ನ ಪ್ರತಿನಿಧಿಯ (ಅಪ್ರಾಪ್ತ ವಯಸ್ಕರಲ್ಲದವರು) ಉಪಸ್ಥಿತಿಯಲ್ಲಿ ಅಪ್ರಾಪ್ತ ವಯಸ್ಕರನ್ನು ಡೋಪ್ ನಿಯಂತ್ರಣ ಸಿಬ್ಬಂದಿ (ಡಿಸಿಪಿ) ಪರೀಕ್ಷೆಗೆ ಸೂಚಿಸಬೇಕು. ಇವರು ರಾಷ್ಟ್ರೀಯ ಆಡಳಿತ ಮಂಡಳಿಯ ಪ್ರತಿನಿಧಿ, ಕೋಚ್, ತಂದೆ-ತಾಯಿ ಮುಂತಾದವರು ಆಗಿರಬಹುದು. ಅಪ್ರಾಪ್ತ ವಯಸ್ಕರು ಆ ಪ್ರತಿನಿಧಿಯನ್ನು ತಿರಸ್ಕರಿಸಿದರೆ, ಡಿಸಿಪಿ, ಅಂತಹ ಬೇರೆ ಯಾವುದೇ ವಯಸ್ಕರು ಹಾಜರಿರುವುದನ್ನು ಖಚಿತಪಡಿಸಬೇಕು. ಯಾವುದೇ ವಯಸ್ಕರು ಲಭ್ಯವಿಲ್ಲದಿದ್ದರೆ, ವಯಸ್ಕರು ಲಭ್ಯವಾಗುವವರೆಗೆ ಅಧಿಸೂಚನೆಯನ್ನು ತಡೆಹಿಡಿಯಲಾಗುತ್ತದೆ.

• ಅಪ್ರಾಪ್ತ ವಯಸ್ಕರಿಗೆ ಸಲಹೆ ಎಂದರೆ ಅವರು ಪರೀಕ್ಷೆಗಾಗಿ ಮಾಹಿತಿ ಪಡೆದಲ್ಲಿ, ತಮ್ಮೊಂದಿಗೆ ಒಬ್ಬ ಪ್ರತಿನಿಧಿಯನ್ನು ಕರೆದೊಯ್ಯಬೇಕು. ಈ ಪ್ರತಿನಿಧಿಯು ಅಧಿಸೂಚನೆಯ ಸಮಯದಲ್ಲಿ ಹಾಜರಿರುವ ಅದೇ ವಯಸ್ಕನಾಗಿರಬಹುದು ಅಥವಾ ಇನ್ನೊಬ್ಬ ವ್ಯಕ್ತಿಯಾಗಿರಬಹುದು. ಎಥ್ಲೀಟ್ ಒಬ್ಬ ಪ್ರತಿನಿಧಿಯನ್ನು ಗುರುತಿಸಲು ಡಿಸಿಪಿ ಮತ್ತು ಒಬ್ಬ ವಯಸ್ಕರ ಮೂಲಕ ಮೇಲ್ವಿಚಾರಣೆ ಮಾಡಲಾಗುತ್ತದೆ.

• ಅಧಿಸೂಚನೆಯ ನಂತರ ಯಾವುದೇ ಸಮಯದಲ್ಲಿ, ಡಿಸಿಪಿಯನ್ನು ಅಪ್ರಾಪ್ತ ವಯಸ್ಕರೊಂದಿಗೆ ಏಕಾಂಗಿಯಾಗಿ ಬಿಡಬಾರದು.

• ಯಾವುದೇ ಎಥ್ಲೀಟ್ ಸ್ಯಾಂಪ್ಲ್ ನೀಡಲು ಸಿದ್ಧರಾದಾಗ, ಎಥ್ಲೀಟ್ ಮಾದರಿ ನೀಡುವುದನ್ನು ನೋಡುವ ಡಿಸಿಪಿ ಯಾವಾಗಲೂ ತಮ್ಮ ನಡವಳಿಕೆಯನ್ನು ಗಮನಿಸುವ ಮೇಲ್ವಿಚಾರಕರೊಂದಿಗೆ ಇರಬೇಕು. ಎಥ್ಲೀಟ್‌ನ ಪ್ರತಿನಿಧಿ ಕೂಡ, ಹಾಜರಿದ್ದರೆ, ಡಿಸಿಪಿಯೊಂದಿಗೆ ಇರಬೇಕು ಮತ್ತು ಎಥ್ಲೀಟ್ ಸ್ಯಾಂಪ್ಲ್ ನೀಡುವುದನ್ನು ನೋಡುವ ಡಿಸಿಪಿ ಮೇಲೆ ನಿಗಾ ಇಡಬೇಕು. ಕೇವಲ ಡಿಸಿಪಿ ಮಾತ್ರವೇ ಎಥ್ಲೀಟ್ ಸ್ಯಾಂಪ್ಲ್ ನೀಡುವುದನ್ನು ನೇರವಾಗಿ ನೋಡಬಹುದು. ಎಥ್ಲೀಟ್ ವಿನಂತಿಸದ ಹೊರತು, ಇನ್ನೊಬ್ಬ ಮೇಲ್ವಿಚಾರಕರಾಗಲೀ ಮತ್ತು ಎಥ್ಲೀಟ್‌ನ ಪ್ರತಿನಿಧಿಯಾಗಲೀ ಅವರು ನೇರವಾಗಿ ಮೂತ್ರ ವಿಸರ್ಜನೆ ಮಾಡುವುದನ್ನು ನೋಡಬಾರದು.

ವಿಕಲಚೇತನ ಎಥ್ಲೀಟ್‌ಗಳನ್ನು ಪರೀಕ್ಷಿಸುವಾಗ, ಕಾರ್ಯವಿಧಾನಕ್ಕೆ ಮುಖ್ಯ ತಿದ್ದುಪಡಿಗಳು ಈ ಕೆಳಗಿನಂತಿವೆ.
ಎಥ್ಲೀಟ್‌ಗಳು ತಿಳಿದಿರಬೇಕಾದ ವಿಷಯಗಳು:

• ದೈಹಿಕ ಅಂಗವೈಕಲ್ಯ ಅಥವಾ ಸೀಮಿತ ಚಲನಶೀಲತೆ ಅಥವಾ ಸೀಮಿತ ಹಸ್ತ-ಕೌಶಲ್ಯ ಹೊಂದಿರುವ ಎಥ್ಲೀಟ್‌ಗಳು ಮಾದರಿ ಸಂಗ್ರಹ ಉಪಕರಣಗಳನ್ನು ಸಂಭಾಳಿಸಲು, ಮಾದರಿ ವಿಭಜನೆ ಮಾಡಲು ಅಥವಾ ಡಿಸಿಎಫ್ ಪೂರ್ಣಗೊಳಿಸುವಾಗ, ಸಹಾಯಕ್ಕಾಗಿ ಯಾವುದೇ ವಯಸ್ಕ ಎಥ್ಲೀಟ್ ಪ್ರತಿನಿಧಿ ಅಥವಾ ಡಿಸಿಒ ಜೊತೆ ವಿಚಾರಿಸಬಹುದು. ಎಥ್ಲೀಟ್‌ಗೆ ಅಸಾಧ್ಯವಾದ ಪಕ್ಷದಲ್ಲಿ, ಪ್ರತಿನಿಧಿಯು ಡಿಸಿಎಫ್ ನ ಅಗತ್ಯ ವಿಭಾಗಗಳನ್ನು ಪೂರ್ಣಗೊಳಿಸಬಹುದು ಮತ್ತು ಎಥ್ಲೀಟ್‌ವನ ಪರವಾಗಿ ಫಾರ್ಮ್ ಗೆ ಸಹಿ ಮಾಡಬಹುದು.



ಎಥ್‌ಲೀಟ್ (ಎಬಿಪಿ) ಪ್ರೋಗ್ರಾಂ ಎಂದರೇನು?

ಎಥ್‌ಲೀಟ್ (ಎಬಿಪಿ) ಹಿಂದಿನ ತತ್ವವೆಂದರೆ ಕಾಲಕ್ರಮೇಣ ಆಯ್ದ ಬಯೋಮಾರ್ಕರ್ಸ್‌ನ (ಜೈವಿಕ ಮಾನದಂಡ) ಮೇಲೆ ನಿಗಾ ಇರಿಸುವುದು, ಇದು ದೇಹದ ಮೇಲೆ ಡೋಪ್‌ನ ಪರಿಣಾಮಗಳನ್ನು ಪರೋಕ್ಷವಾಗಿ ಬಹಿರಂಗಪಡಿಸುತ್ತದೆ.

• ಪ್ರತಿಯೊಬ್ಬ ಎಥ್‌ಲೀಟ್‌ಗಾಗಿ ಅವರ ಹಿಂದಿನ ನಮೂನೆಗಳಿಂದ ಡೇಟಾವನ್ನು ಬಳಸಿಕೊಂಡು ಭವಿಷ್ಯದ ನಮೂನೆಗಳ ಸಂಭಾವ್ಯ ವ್ಯಕ್ತಿಗತ ಮಿತಿಗಳು ಅಥವಾ ಸಂದರ್ಭ ಮಿತಿಯ ಅಂದಾಜನ್ನು ಅಂತರ್ರಾಷ್ಟ್ರೀಯ ಪ್ರೊಫೈಲ್ ಸ್ವಾಟಿಸ್ಟಿಕಲ್ ಟೂಲ್ಸ್ ಬಳಸಿ ಮಾಡಲಾಗುತ್ತದೆ.

• ಯಾವುದೇ ಒಂದು ಮಾದರಿಯಿಂದ ಪಡೆದ ಡೇಟಾ ಎಥ್‌ಲೀಟ್‌ನ ಸಾದರ್ಭಿಕ ವ್ಯಾಪ್ತಿಯಿಂದ ಹೊರಗಿದ್ದರೆ, ಅದು ಅಸಾಮಾನ್ಯ ವ್ಯಾಲ್ಯೂ ಡೋಪ್ ಅಥವಾ ಯಾವುದೇ ರೋಗನಿರ್ಣಯದ ಸ್ಥಿತಿಯ ಸೂಚನೆ ಆಗಿರಬಹುದು.

• ಪ್ರಸ್ತುತ, ಎಬಿಪಿ ಪ್ರೋಗ್ರಾಂನಲ್ಲಿ ಮೂರು ಮಾಡ್ಯೂಲ್ ಗಳನ್ನು ಜಾರಿಗೆ ತರಲಾಗಿದೆ: ಹೆಮೇಟೋಲಾಜಿಕಲ್, ಸ್ಟೆರಾಯ್ಡಲ್ ಮತ್ತು ಎಂಡೋಕ್ರೈನ್ ಮಾಡ್ಯೂಲ್.


ಎಬಿಪಿ ಪ್ರೋಗ್ರಾಂನ ಉದ್ದೇಶಗಳು

• ಅಸಾಮಾನ್ಯ ಪ್ರೊಫೈಲ್ ಹೊಂದಿರುವ ಎಥ್‌ಲೀಟ್‌ಗಳ ಮೇಲೆ ಕೇಂದ್ರೀಕರಿಸಿ, ಸಾಂಪ್ರದಾಯಿಕ ಆಂಟಿ-ಡೋ ಪರೀಕ್ಷೆಯನ್ನು ನಡೆಸಲು ಇದನ್ನು ಬಳಸಬಹುದು.

• ಡೋಪಿಂಗ್ ವಿರೋಧಿ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಡೋಪಿಂಗ್ ಅನ್ನು ದೃಢೀಕರಿಸುವ ಪುರಾವೆಯಾಗಿಯೂ ಇದನ್ನು ಬಳಸಬಹುದು.



ಎಥ್‌ಲೀಟ್ ಬಯಾಲಾಜಿಕಲ್ ಪಾಸ್‌ಪೋರ್ಟ್‌ನ ಪ್ರಕ್ರಿಯೆ





ಎಬಿಪಿ ಪ್ರೋಗ್ರಾಂ ಮಾಡ್ಯೂಲ್ ಗಳು

1. ಹೆಮೇಟೋಲಾಜಿಕಲ್ ಮಾಡ್ಯೂಲ್: ಹೆಮೇಟೋಲಾಜಿಕಲ್ ಮಾಡ್ಯೂಲ್ ರಕ್ತದ ಡೋಪ್ ನ ಮಾರ್ಕರ್ ಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತದೆ. ಈ ಮಾಡ್ಯೂಲ್‌ನ ಉದ್ದೇಶ ಎಂದರೆ, ಆಕ್ಸೀಜನ್‌ನ ಸಾಗಣೆ ಅಥವಾ ವಿತರಣೆ ಹೆಚ್ಚಿಸಲು ನಿಷಿದ್ಧ ಪದಾರ್ಥಗಳನ್ನು ಮತ್ತು/ಅಥವಾ ನಿಷಿದ್ಧ ವಿಧಾನಗಳನ್ನು ಗುರುತಿಸುವುದು.ಇದರಲ್ಲಿ ಎಎಇಗಳ ಬಳಕೆ ಮತ್ತು ಬ್ಲಡ್ ಟ್ರಾನ್ಸ್‌ಫ್ಯೂಶನ್ ಅಥವಾ ಮ್ಯಾನಿಪ್ಯುಲೇಶನ್ ಯಾವುದೇ ರೂಪ ಸೇರಿದೆ.

ಎಬಿಪಿ ಹೆಮೇಟಾಲಾಜಿಕಲ್ ಮಾಡ್ಯೂಲ್‌ನ ಒಳಗೆ ಈ ಕೆಳಗಿನ ಬ್ಲಡ್ ವೇರಿಯೆಬ್‌ಲ್‌ಗಳನ್ನು ಪರಿಗಣಿಸಲಾಗುತ್ತದೆ, ಅಂದರೆ ಅಸಾಮಾನ್ಯ ಬ್ಲಡ್ ಪ್ರೊಫೈಲ್ ಸ್ಕೋರ್, ಹೆಮೇಟೋಕ್ರಿಟ್, ಹಿಮೋಗ್ಲೋಬಿನ್, ಇಮ್ಮೇಚೂರ್ ರೆಟಿಕ್ಯುಲೋಸೈಟ್ ಫ್ರಾಕ್ಷನ್, ಸರಾಸರಿ ಕಾರ್ಪಸ್ಕುಲರ್ ಹಿಮೋಗ್ಲೋಬಿನ್, ಸರಾಸರಿ ಕಾರ್ಪಸ್ಕುಲರ್ ಹಿಮೋಗ್ಲೋಬಿನ್ ಕಾನ್‌ಸೆಂಟ್ರೇಶನ್, ಸರಾಸರಿ ಕಾರ್ಪಸ್ಕುಲರ್ ಪ್ರಮಾಣ, ಆಫ್-ಸ್ಕೋರ್, ಪ್ಲೇಟ್‌ಲೆಟ್ ಕೌಂಟ್ ಎಣಿಕೆ, ಕೆಂಪು ರಕ್ತ ಕಣ (ಎರಿಥ್ರೋಸೈಟ್) ಕೌಂಟ್, ಕೆಂಪು ರಕ್ತಕಣ ವಿತರಣಾ ಅಗಲ (ಪ್ರಮಾಣಿತ ವಿಚಲನೆ), ರೆಟಿಕ್ಯುಲೋಸೈಟ್ಸ್ ಕೌಂಟ್, ರೆಟಿಕ್ಯುಲೋಸೈಟ್‌ಗಳ ಶೇಕಡಾವಾರು, ಬಿಳಿ ರಕ್ತ ಕಣಗಳು

2. ಸ್ಟೀರಾಯ್ಡಲ್ ಮಾಡ್ಯೂಲ್: ಸ್ಟೀರಾಯ್ಡ್ ಮಾಡ್ಯೂಲ್ ಮೂತ್ರ ಮತ್ತು / ಅಥವಾ ಸೀರಮ್ ಮಾದರಿಗಳಲ್ಲಿ ಅಳೆಯಲಾದ ಸ್ಟೀರಾಯ್ಡ್ ಡೋಪ್‌ನ ಮಾರ್ಕರ್‌ಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತದೆ. ಬಾಹ್ಯವಾಗಿ ನಿರ್ವಹಿಸಿದಾಗ ಅಂತರ್‌ಜಾತ ಎನಾಬಾಲಿಕ್ ಆಂಡ್ರೊಜೆನಿಕ್ ಸ್ಟೆರಾಯ್ಡ್‌ಗಳನ್ನು (ಇಎಎಎಸ್) ಗುರುತಿಸುವ ಗುರಿಯನ್ನು ಈ ಮಾಡ್ಯೂಲ್ ಹೊಂದಿದೆ.

ಸ್ಟೀರಾಯ್ಡಲ್ ಮಾಡ್ಯೂಲ್ ಮೂತ್ರದ ನಮೂನೆಗಳಲ್ಲಿ ಯಾವುದೇ ರೀತಿಯ ಹಸ್ತಕ್ಷೇಪ ನಡೆಸಿದರೆ ಅಥವಾ ಬೇರೊಬ್ಬರ ಮೂತ್ರದ ಮಾದರಿಯ ಜೊತೆ ಬದಲಾಯಿಸಿದಾಗ ಅದನ್ನು ಗುರುತಿಸುವ ಒಂದು ಪರಿಣಾಮಕಾರಿ ಸಾಧನವಾಗಿದೆ.

3. ಎಂಡೋಕ್ರೈನ್ ಮಾಡ್ಯೂಲ್: ಎಂಡೋಕ್ರೈನ್ ಮಾಡ್ಯೂಲ್ ಎಚ್‌ಜಿಎಚ್ ಡೋಪ್ನ ಮಾರ್ಕರ್‌ಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತದೆ. ಈ ಮಾಡ್ಯೂಲ್‌ನ ಉದ್ದೇಶ ಎಂದರೆ, ಎಚ್‌ಜಿಎಚ್‌ನ ಉಪಯೋಗ ಮತ್ತು ನಿಷೇಧಿತ ಪಟ್ಟಿಯ ಸೆಕ್ಷನ್ ಎಸ್ 2.2 ರ ಅಡಿಯಲ್ಲಿ ವರ್ಗೀಕರಿಸಲಾದ ಎಚ್ ಜಿಎಚ್ ಎನಾಲಾಗ್ಸ್, ಫ್ರೆಗಮೆಂಟ್ಸ್ ಮತ್ತು ರೀಲೀಸ್ ಕಾರಕಗಳ ಬಳಕೆಯ ಬಗ್ಗೆ ತಿಳಿಯುವುದು.

ಈ ಮಾಡ್ಯೂಲ್ ಇನ್ಸುಲಿನ್‌ನಂತಹ ವೃದ್ಧಿಕಾರಕ-I (ಐಜಿಎಫ್-I) ಬಳಕೆಯನ್ನು ಸಹ ಸೂಚಿಸಬಹುದು, ಇದನ್ನು ನಿಷೇಧಿತ ಪಟ್ಟಿಯ ಸೆಕ್ಷನ್ ಎಸ್ 2.3 ರ ಅಡಿಯಲ್ಲಿ ವರ್ಗೀಕರಿಸಲಾಗಿದೆ.



ಎಥ್‌ಲೀಟ್‌ಗಳ ಹಕ್ಕುಗಳು ಮತ್ತು ಜವಾಬ್ದಾರಿಗಳು

ಎಥ್‌ಲೀಟ್‌ಗಳ ಹಕ್ಕುಗಳು:

1. ಡೋಪ್ ನಿಯಂತ್ರಣ ಸ್ಟೇಷನ್ ಗೆ ಅವರ ಜೊತೆ ಹೋಗಲು ತಮ್ಮ ಆಯ್ಕೆಯ ಪ್ರತಿನಿಧಿಯನ್ನು ನೇಮಿಸಿ.

2. ಭಾಷಾಂತರಕಾರರಿಗಾಗಿ ವಿನಂತಿಸಿ.

3. ಮಾದರಿ ಸಂಗ್ರಹ ಕಾರ್ಯವಿಧಾನದ ಬಗ್ಗೆ ಮಾಹಿತಿಯನ್ನು ಕೇಳಿ.

4. ಮಾನ್ಯವಾದಂತಹ ಕಾರಣಗಳಿಗಾಗಿ ಡೋಪ್ ನಿಯಂತ್ರಣ ಕೇಂದ್ರಕ್ಕೆ ರಿಪೋರ್ಟ್ ಮಾಡುವಲ್ಲಿ ವಿಳಂಬದ ಕೋರಿಕೆ ಅಥವಾ ರಿಪೋರ್ಟ್ ಮಾಡಿದ ನಂತರ ಡೋಪ್ ನಿಯಂತ್ರಣ ಅಧಿಕಾರಿಯ ಒಪ್ಪಿಗೆಯೊಂದಿಗೆ ಪೋಷಕರ ಸಂಪೂರ್ಣ ಮಾಹಿತಿಯೊಂದಿಗೆ ಡೋಪ್ ನಿಯಂತ್ರಣ ಸ್ಟೇಶನ್‌ನಿಂದ ಹೊರಡುವುದು.

5. ಅವರು ವಿಕಲ ಚೇತನರಾಗಿದ್ದರೆ ತಿದ್ದುಪಡಿ ಮಾಡಲು ವಿನಂತಿಸುವುದು.

6. ಪ್ರಕ್ರಿಯೆಗೆ ಸಂಬಂಧಿಸಿದಂತೆ ನಿಮ್ಮ ಯಾವುದೇ ಸಮಸ್ಯೆಗಳನ್ನು ದಾಖಲಿಸುವುದು.

ಎಥ್‌ಲೀಟ್‌ಗಳ ಜವಾಬ್ದಾರಿ

1. ಡೋಪಿಂಗ್ ವಿರೋಧಿ ನೀತಿಯ (ನಿಖರವಾದ ಮಾಹಿತಿಯನ್ನು ಒದಗಿಸುವುದು ಸೇರಿದಂತೆ) ಬಗ್ಗೆ ತಿಳಿದುಕೊಳ್ಳಿ ಮತ್ತು ಅನುಸರಿಸಿ.

2. ಮಾದರಿ ಸಂಗ್ರಹ ಪ್ರಕ್ರಿಯೆಗೆ ಲಭ್ಯವಿರಿ ಮತ್ತು ಅನುಸರಣೆ ಮಾಡಿ.

3. ಮಾದರಿ ಸಂಗ್ರಹ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಎಲ್ಲಾ ಸಮಯದಲ್ಲೂ ಅಧಿಕಾರಿಯ ನಿಗಾದಲ್ಲಿರಿ.

4. ಸಾಧ್ಯವಾದಷ್ಟು ಬೇಗ ಅಥವಾ 60 ನಿಮಿಷಗಳ ಒಳಗೆ ಡೋಪ್ ನಿಯಂತ್ರಣ ಸ್ಟೇಷನ್ ಗೆ ರಿಪೋರ್ಟ್ ಮಾಡಿ.

5. ಸಲಕರಣೆಗಳನ್ನು ಸಂಭಾಳಿಸುವುದು, ಮಾದರಿ ಸಂಗ್ರಹಣೆ ಸ್ವಯಂ ನಿರ್ವಹಣೆ ಹಾಗೂ ಮಾದರಿಯನ್ನು ವಿಭಜಿಸುವುದು, ಸೀಲ್ ಮಾಡುವುದು ಮತ್ತು ಭದ್ರಪಡಿಸುವುದು.


6. ಎಲ್ಲಾ ದಾಖಲೆಗಳನ್ನು ಸರಿಯಾಗಿ ಭರ್ತಿ ಮಾಡಿ ಮತ್ತು ಅವುಗಳಲ್ಲಿ ಸಹಿ ಮಾಡಲಾಗಿದೆ ಎಂದು ಖಚಿತಪಡಿಸಿಕೊಳ್ಳಿ.

7. ನಿಷೇಧಿತ ವಸ್ತುಗಳ ಬಗ್ಗೆ ಜಾಗರೂಕರಾಗಿರಿ.



ಯಾವುದೇ ನಿಷೇಧಿತ ಡ್ರಗ್ಸ್ ಕಾರಣ ನಿಮ್ಮ ಸ್ಪೋರ್ಟ್ಸ್ ಕರಿಯರ್‌ಅನ್ನು ಹಾಳುಮಾಡಲು ಬಿಡಬೇಡಿ

ಎಥ್‌ಲೀಟ್‌ಗಳು ಯಾವುದೇ ಔಷಧ ಅಥವಾ ಅದರ ಅಂಶಗಳ ಮೇಲಿನ ನಿಷೇಧದ ಸ್ಥಿತಿಯನ್ನು ಸುಲಭವಾಗಿ ಕಂಡುಹಿಡಿಯುವ ಮೂಲಕ ಉದ್ದೇಶಪೂರ್ವಕವಲ್ಲದ ಡೋಪ್ ನಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಬಹುದು.



ನಿಮ್ಮ ಮೆಡಸಿನ್ ಆಪ್ ಬಗ್ಗೆ ತಿಳಿಯಿರಿ

QR ಕೋಡ್ ಸ್ಕ್ಯಾನ್ ಮಾಡಿ
ಡೌನ್‌ಲೋಡ್ ಮಾಡಿ

ನಮ್ಮನ್ನು ಸಂಪರ್ಕಿಸಿ:

ಸೂಚನೆ:- ವಿರೋಧಾಭಾಸದ ಸಂದರ್ಭದಲ್ಲಿ ಇಂಗ್ಲಿಷ್ ಆವೃತ್ತಿಯು ಮಾನ್ಯವಾಗಿರುತ್ತದೆ.

ಸೂಚನೆಗಳು

ಸೂಚನೆಗಳು

#SAYNO TODOPING | TODAY & EVERYDAY

ರಾಷ್ಟ್ರೀಯ
ಡೋಪ್ ನಿರೋಧಕ
ಏಜೆನ್ಸಿ

निष्पक्ष खेल
Play fair

ಹಾಲ್ ನಂಬರ್ 103-104, ಒಂದನೇ ಮಹಡಿ,
ಜವಾಹರಲಾಲ್ ನೆಹರು ಸ್ಟೇಡಿಯಂ, ನವದೆಹಲಿ-110003
தொலைபேசி: 91-11-24368274, 011-24368248, 1800 11 9919
ಇಮೈಲ್: info.nada@nic-in

nadaindia.yas.gov.in ಗೆ ಲಾಗ್ ಇನ್ ಮಾಡಿ

